ದಿನಾಂಕಃ 05.09.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀಸವಾಲುಃ ಪ್ರತಿವಾದಿಯರ ಪರ ಶ್ರೀ. ಬಿ ಕೆ ಜೆ ವಕೀಲರಿಂದಃ</u>**

ನಾನು 10 ನೇ ತರಗತಿಯವರೆಗೆ ಓದಿರುತ್ತೇನೆ. ನಾನು ಖನಗಾಂವ ಗ್ರಾಮದಲ್ಲಿ ವಾಸವಾಗಿದ್ದೇನೆ. ವಾದಿಯರಾದ ನಾವೆಲ್ಲರೂ ಒಟ್ಟಿಗೆ ವಾಸವಾಗಿದ್ದೇವೆ. ಸತ್ಯೆವ್ವ ಪಕ್ಕಪ್ಪ ಹೊಲೇರ ಇವಳು ನನಗೆ ತಂಗಿಯಾಗಬೇಕು. ಅವಳು ಸನ್ 2004 ರಲ್ಲಿ ತೀರಿಕೊಂಡಿರುತ್ತಾಳೆ. ಅವಳಿಗೆ ಗಂಡ ಮತ್ತು ಮಕ್ಕಳು ಇರುವುದಿಲ್ಲ. ಈ ಮುಂಚೆ ಪ್ರತಿವಾದಿಯರ ವಿರುದ್ಧ ನಾನು, ವಾದಿ ನಂಬರ 2, ಮೃತ ಸತ್ಯೆವ್ವ ಸೇರಿಕೊಂಡು ಸನ್ 2007 ರಲ್ಲಿ ಅಸಲು ದಾವಾ ನಂಬರ 304/2007 ನೇ ದಾವೆ ಹೂಡಿದ್ದೆವು ಎಂದರೆ ನಿಜ. ಸದರಿ ಅಸಲು ದಾವಾ ನಂಬರ 304/2007 ನೇದ್ದನ್ನು ಸರ್ವೆ ನಂಬರ -139, ಕ್ಷೇತ್ರ 13 ಎಕರೆ 37 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಹೂಡಿದ್ದೇವು. ಸದರಿ ದಾವೆಯಲ್ಲಿ ದಾವಾ ಆಸ್ತಿಗೆ ನಾವು ಮಾಲಿಲೀಕರು ಹಾಗೂ ಕಬ್ಜೆಯಿಲ್ಲಿದ್ದು, ನಮ್ಮ ಕಬ್ಜೆಗೆ ಹರಕತ್ತು ಮಾಡಬಾರದೆಂದು ಪರಿಹಾರ ಕೇಳಿದ್ದೇವು ಎಂದರೆ ನಿಜ. ಸದರಿ ದಾವೆಯಲ್ಲಿ ರಾಮಪ್ಪ ಹಾಲಪ್ಪಾ ಜಾಯಿ 1ನೇ ಪ್ರತಿವಾದಿಯಾಗಿದ್ದನು ಎಂದರೆ ನಿಜ. ಆತ ಸನ್ 2009-2010 ರಲ್ಲಿ ತೀರಿಕೊಂಡಿರಬಹುದು. ಸದರಿ ದಾವೆಯಲ್ಲಿ ನಾನು ಸಾಕ್ಷ್ಯ ನುಡಿದಿದ್ದೆ. ಸದರಿ ಪ್ರಕರಣದಲ್ಲಿ ರಾಮಪ್ಪ ಜಾಯಿ ವಕೀಲರ ಮೂಲಕ ಹಾಜರಾಗಿ ಸಾಕ್ಷ್ಯ ನುಡಿದಿದ್ದನು ಎಂದರೆ ನಿಜ. ಸದರಿ ದಾವೆ ವಜಾಗೊಂಡಿರುತ್ತದೆಂದರೆ ನಿಜ. ಸದರಿ ತೀರ್ಪಿನ ವಿರುದ್ಧ ಮಾನ್ಯ ಜಿಲ್ಲಾ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದೇವು ಎಂದರೆ ನಿಜ. ಸದರಿ ಮೇಲ್ಮನವಿಯು ಸಹ ವಜಾಗೊಂಡಿರುತ್ತದೆಂದರೆ ನಿಜ. ಸದರಿ ತೀರ್ಪಿನ ವಿರುದ್ಧ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದೇವು ಎಂದರೆ ನಿಜ. ಸದರಿ ಮೇಲ್ಮನವಿಯು ಸಹ ವಜಾಗೊಂಡಿರುತ್ತದೆಂದರೆ ನಿಜ. ಸದರಿ

ಮಾನ್ಯ ಉಚ್ಚ ನ್ಯಾಯಾಲಯದ ವಿರುದ್ಧ ಸರ್ವೋಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುವುದಿಲ್ಲ ಎಂದರೆ ನಿಜ. ಸದರಿ ದಾವೆಯಲ್ಲಿಯ ಆಸ್ತಿಗಳು ಹಾಗೂ ಪ್ರಸ್ತುತ ದಾವೆಯಲ್ಲಿಯ ಆಸ್ತಿಗಳು ಎರಡೂ ಒಂದೇ ಎಂದರೆ ನಿಜ. ಅದೇ ರೀತಿ ಎರಡೂ ಪ್ರಕರಣಗಳಿಗೆ ಪಕ್ಷಗಾರರು ಒಂದೇ ಇರುತ್ತಾರೆಂದರೆ ನಿಜ.

ನನ್ನ ಅಜ್ಜಿ ಸತ್ಯೆವ್ವ ದೇವದಾಸಿ ಇದ್ದಳು. ಅವಳಿಗೆ ಶಿವಪ್ಪ ಎನ್ನುವ ಒಬ್ಬನೇ ಮಗ ಇದ್ದನು ಎಂದರೆ ನಿಜ. ದಾವಾ ಆಸ್ತಿಯನ್ನು ಸದರಿ ಸತ್ಯೆವ್ವಳಿಗೆ ಅವಳ ಅಣ್ಣತಮ್ಮಂದಿರರು ಬಿಟ್ಟುಕೊಟ್ಟಿದ್ದರು. ಸದರಿ ಸತ್ಯೆವ್ವಳ ಹೆಸರಿಗೆ ಇದ್ದ ದಾವಾ ಆಸ್ತಿ 13 ಎಕರೆ 37 ಗುಂಟೆ ಜಮೀನಿನಲ್ಲಿ 01 ಎಕರೆ 06 ಗುಂಟೆ ಜಮೀನನ್ನು 1944 ರಲ್ಲಿ ಅವಳ ಮಗ ಶಿವಪ್ಪನು ಸಿದ್ಧಲಿಂಗವ್ವ ಹಾಲಪ್ಪಾ ಜಾಯಿ ಇವರಿಗೆ ಮಾರಾಟ ಮಾಡಿದ್ದನು ಎಂದರೆ ಸಾಕ್ಷಿಯು ಮುಂಚೆ ನನಗೆ ಗೊತ್ತಿರಲಿಲ್ಲ, ಕಾಗದಪತ್ರ ನೋಡಿ ಗೊತ್ತಾಗಿರುತ್ತದೆಂದು ನುಡಿಯುತ್ತಾರೆ. ಆ ಬಗ್ಗೆ ನನಗೆ ಸನ್ 2007 ರಲ್ಲಿ ಗೊತ್ತಾಗಿರುತ್ತದೆ. ಸದರಿ ಸಂಗತಿ ಗೊತ್ತಾದ ಬಳಿಕ ಸನ್ 2007 ರಲ್ಲಿ ಮೇಲೆ ಹೇಳಿದ ಅಸಲು ದಾವಾ ನಂಬರ 304/2007 ನೇದ್ದನ್ನು ದಾಖಲಿಸಿದ್ದೇವು ಎಂದರೆ ನಿಜ. ಆ ಪ್ರಕಾರ ಮೇಲೆ ಹೇಳಿದ 01 ಎಕರೆ 06 ಗುಂಟೆ ಜಮೀನಿಗೆ ಸಿದ್ಧಲಿಂಗವ್ವಳ ಹೆಸರಿಗೆ ಸನ್ 1944 ರಲ್ಲಿಯೇ ಡೈರಿ ನಂಬರ 2982 ನೇದ್ದರಂತೆ ದಾಖಲಾಗಿರುತ್ತದೆಂದರೆ ನಿಜ. ಅದೇ ರೀತಿ ಅದಕ್ಕಿಂತ ಮುಂಚೆ ದಿ. 10.03.1941 ರಂದು ಸದರಿ ಶಿವಪ್ಪ 13 ಎಕರೆ 37 ಗುಂಟೆ ಜಮೀನಿನ ಪೈಕಿ 06 ಎಕರೆ 39 ಗುಂಟೆ ಜಮೀನನ್ನು ಮೇಲೆ ಹೇಳಿದ ಸಿದ್ಧಲಿಂಗವ್ವಳಿಗೆ 500/- ಗಳಿಗೆ ಮಾರಾಟ ಮಾಡಿದ್ದನು ಎಂದರೆ ಸಾಕ್ಷಿಯು ಕಾಗದ ಪತ್ರ ನೋಡಿ ಗೊತ್ತಾಗಿರುತ್ತದೆಂದು ನುಡಿಯುತ್ತಾರೆ.

ಫಕೀರಪ್ಪ ನಿಂಗಪ್ಪ ಹೊಲೇರ ಇತನು ಶಿವಪ್ಪನ ಚಿಕ್ಕಪ್ಪ ಅಥವಾ ದೊಡ್ಡಪ್ಪನ ಮಗ ಇರುತ್ತಾನೆ. ಸದರಿ ಫಕೀರಪ್ಪನು ಸನ್ 1941 ರಲ್ಲಿ ದಾವಾ ಆಸ್ತಿ 13 ಎಕರೆ 37

ಗುಂಟೆ ಜಮೀನ ಪೈಕಿ 03 ಎಕರೆ 19 ಗುಂಟೆ ಜಮೀನನ್ನು ಮೇಲೆ ಹೇಳಿದ ಸಿದ್ಧಲಿಂಗವ್ವಳಿಗೆ ರೂ.200/-ಗಳಿಗೆ ಮಾರಾಟ ಮಾಡಿರುತ್ತಾನೆಂದರೆ ನನಗೆ ಮಾಹಿತಿ ಇಲ್ಲ. ಆ ಬಗ್ಗೆ ಡೈರಿ ನಂಬರ 2982, ಡೈರಿ ನಂಬರ 2079, ಡೈರಿ ನಂಬರ 2200 ನೇದ್ದವುಗಳು ಮಂಜೂರಾಗಿದ್ದು, ನಾವು ಅವುಗಳನ್ನು ಇವತ್ತಿನವರೆಗೂ ಪ್ರಶ್ನಿಸಿರುವುದಿಲ್ಲ ಎಂದರೆ ನಿಜ. ಸದರಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ಸನ್ 1941 ರಿಂದ ಅವಳು ಸಾಯುವವರೆಗೂ ಸಿದ್ಧಲಿಂಗವ್ವಳ ಹೆಸರು ದಾಖಲು ಇದ್ದವು ಎಂದರೆ ನಿಜ.

ದಾವಾ ಆಸ್ತಿಯು ಸತ್ಯೆವ್ವಳ ಮಗನಾದ ಶಿವಪ್ಪನ ಹೆಸರಿಗೆ ಡೈರಿ ನಂಬರ 2077 ನೇದ್ದರಂತೆ ದಾಖಲಾಗಿರುತ್ತದೆಂದರೆ ನಿಜ. ಸದರಿ ಮೇಲೆ ಹೇಳಿದ ಮೂರು ಖರೀದಿ ಪತ್ರಗಳು ಅಗುವ ಸಮಯದಲ್ಲಿ ನಾನಾಗಲೀ, 2 ನೇ ವಾದಿಯಾಗಲೀ , 4 ರಿಂದ 8 ನೇ ವಾದಿಯರಾಗಲೀ ಜನಿಸಿರಲಿಲ್ಲ ಎಂದರೆ ನಿಜ. ಸರ್ವೆ ನಂಬರ 139 , ಕ್ಷೇತ್ರ 13 ಎಕರೆ 37 ಗುಂಟೆ ಜಮೀನು ಇವತ್ತಿನವರೆಗೂ ಪೋಟ ಹಿಸ್ಸಾ ಆಗಿರುವುದಿಲ್ಲ. ಅದು ಒಂದೇ ಡಾಗ ಇರುತ್ತದೆ.

ಸದರಿ ಸರ್ವೆ ನಂಬರ 139 ರಲ್ಲಿ ರಾಮಪ್ಪಾ ಜಾಯಿ ಇವರು ಸನ್ 1954 ರಲ್ಲಿ ಬಾಂವಿಯನ್ನು ತೋಡಿರುತ್ತಾರೆಂದರೆ ಸಾಕ್ಷಿಯು ನಮ್ಮ ಹಿರಿಯರು ತೋಡಿರುತ್ತಾರೆಂದು ನುಡಿಯುತ್ತಾರೆ. ಆ ಸಮಯದಲ್ಲಿ ಮೇಲೆ ಹೇಳಿದ ಸಿದ್ಧಲಿಂಗವ್ವ ಇವಳು ರಾಮಪ್ಪ ಜಾಯಿ ಇವನಿಗೆ ಸದರಿ ಜಮೀನಿನಲ್ಲಿ ಬಾಂವಿಯನ್ನು ತೋಡಲು ತನ್ನದು ಯಾವುದೇ ತಕರಾರು ಇರುವುದಿಲ್ಲ, ಸದರಿ ಜಮೀನಿಗೆ ನೀವೇ ಮಾಲೀಕರು ಇರುತ್ತೀರಿ ಎಂದು ಪತ್ರ ಬರೆದಿರುತ್ತಾಳೆಂದರೆ ಆ ಬಗ್ಗೆ ನನಗೆ ಮಾಹಿತಿ ಇಲ್ಲ. ಸದರಿ ಪತ್ರವನ್ನು ಅಸಲು ದಾವಾ ನಂಬರ 304/2007 ನೇದ್ದರಲ್ಲಿಯೂ ಸಹ ರಾಮಪ್ಪ ಜಾಯಿ ಸಹ ಹಾಜರುಪಡಿಸಿದ್ದನು ಎಂದರೆ ನನಗೆ

ಗೊತ್ತಿಲ್ಲ. ನಾವು ದಾವಾ ಆಸ್ತಿಯ ಕಬ್ಜೆಯಲ್ಲಿರುತ್ತೇವೆ ಎಂದು ತೋರಿಸಲು ಕಂದಾಯ ರಸೀದಿಗಳನ್ನು ಹಾಜರುಪಡಿಸಿರುವುದಿಲ್ಲ. ಸನ್ 1941 ರಿಂದ ಇವತ್ತಿನವರೆಗೂ ಸಹ ದಾವಾ ಆಸ್ತಿಯ ಪಹಣಿಪತ್ರಿಕೆಗಳಲ್ಲಿ ಪ್ರತಿವಾದಿಯರ ಕುಟುಂಬದವರ  ಹೆಸರುಗಳು ಮುಂದುವರೆದಿರುತ್ತವೆ ಎಂದರೆ ನಿಜ. ದಾವಾ ಆಸ್ತಿಯು ಪ್ರಸ್ತುತ ನೀರಾವರಿ ಜಮೀನು ಆಗಿರುತ್ತದೆ.

ದಾವಾ ಆಸ್ತಿಯಲ್ಲಿ ಗೋವಿನ ಜೋಳ, ತರಕಾರಿ ಬೆಳೆ ಇರುತ್ತದೆ. ದಾವಾ ಆಸ್ತಿಯಲ್ಲಿ ನಾವು ಗೋವಿನ ಜೋಳ ಬೆಳೆದ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ. ನಾವು ದಾವಾ ಆಸ್ತಿಯ ಕಬ್ಜೆಯಲ್ಲಿರುತ್ತೇವೆ ಎಂದು ತೋರಿಸಲು ಬಾಯಿ ಹೇಳಿಕೆಯನ್ನು ಹೊರತುಪಡಿಸಿ ಬೇರೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ನಿಜ.

**ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ